ಅಂಗಳದಲ್ಲಾದರೂ ಓಡಾಡು ಎಂದರೆ ಬಿಸಿಲು ಎಂದೂ ನೆಪಕೊಟ್ಟು ಬೆಳಗ್ಗೆಯಿಂದ ಸಂಜೆಯ ತನಕ ಮಲಗುವುದನ್ನೇ ರೂಢಿ ಮಾಡಿಕೊಂಡ. ಆದರೆ, ಎಂತಹ ಕ್ಷಣದಲ್ಲೂ ಕರೆಯದಿದ್ದರೂ ಓಡಿ ಬರುತ್ತಿದ್ದುದೆಂದರೆ ಮನೆಯ ಫೋನು ರಿಂಗುಗುಟ್ಟಿದಾಗ. ಗೋವಿಂದನಿಗೆ ಅದೊಂದು ಚಟ. ಯಾರದ್ದೇ ಫೋನ್ ಬಂದರೂ ಹತ್ತಿರದಲ್ಲಿ ನಿಂತು ಸಾಧ್ಯವಾದಷ್ಟನ್ನು ಆಲಿಸುವುದು. ಮೊದಮೊದಲಿಗೆ ಇದನ್ನು ತಮಾಷೆಯಾಗಿ ಪರಿಗಣಿಸಿದ ಶ್ಯಾಮರಾಯರು ನಂತರ ಜೋರು ಮಾಡಿ ಅವನನ್ನು ದೂರ ನಿಲ್ಲಿಸಲು ಶುರು ಮಾಡಿದರು. ಫೋನಿನಲ್ಲಿ ಅರ್ಧಂಬರ್ಧ ಕೇಳಿಸಿಕೊಂಡ ಸಂಗತಿಗಳನ್ನೆಲ್ಲಾ ತನಗೆ ಬೇಕಾದಂತೆ ಕಲ್ಪಿಸಿಕೊಂಡು ಯಾರು ಯಾರ ಬಳಿಯೋ ಹೋಗಿ ಹೇಳುವ ಅಭ್ಯಾಸ ಗೋವಿಂದನಿಗೆ ಇದ್ದುದರಿಂದ ಶ್ಯಾಮರಾಯರು ಆದಷ್ಟು ಜಾಗ್ರತೆ ಮಾಡಲಾರಂಭಿಸಿದರು.

ಅದೊಂದು ದಿನ ಶ್ಯಾಮರಾಯರ ಅಕ್ಕ ಶ್ಯಾಮಲಾ ತವರು ಮನೆಗೆ ಬಂದಾಗ ಗೋವಿಂದ ಭಟ್ಟನನ್ನು ನೋಡಿ ಹುಬ್ಬೇರಿಸಿದಳು. ಕಾಡುಕೊಪ್ಪಲಿಗೆ ಬರುವ ಮುನ್ನ ತನ್ನ ಮನೆಗೂ ಬಂದು ಹೋಗಿದ್ದ ಗೋವಿಂದ ಆಗ ಇಷ್ಟು ದಪ್ಪ ಇರಲಿಲ್ಲವೆಂಬುದು ಶ್ಯಾಮಲಾಳ ಅಭಿಪ್ರಾಯ. ಸಾಲದ್ದಕ್ಕೆ ಅವನಿಗೆ ಶುಗರ್ ಇರುವ ವಿಚಾರವೂ ಆಕೆಗೆ ತಿಳಿದಿದ್ದರಿಂದ ಮತ್ತಷ್ಟು ಆತಂಕ ಮೂಡಲು ಕಾರಣವಾಯಿತು. ಗೋವಿಂದ ಶುಗರ್ ಮಾತ್ರೆ ನುಂಗುವ ವಿಚಾರವನ್ನು ಶ್ಯಾಮರಾಯರ ಬಳಿ ಹೇಳಿರಲಿಲ್ಲ. ಅಷ್ಟು ದಿನಗಳ ಕಾಲವೂ ಕಾಫಿಯೊಟ್ಟಿಗೆ ಕದ್ದು ಮುಚ್ಚಿ ಮಾತ್ರೆ ನುಂಗುತ್ತಿದ್ದ ಗುಟ್ಟು ಶ್ಯಾಮಲಾಳಿಂದಾಗಿ ಎಲ್ಲರೆದುರೂ ಬಯಲಾಯಿತು. ಈ ವಿಚಾರಗಳನ್ನೆಲ್ಲಾ ತನ್ನಿಂದ ಮುಚ್ಚಿಟ್ಟಿದ್ದಲ್ಲದೇ, ತನಗೆ ಯಾವ ಕಾಯಿಲೆಗಳೂ ಇಲ್ಲ, ಏನನ್ನು ಬೇಕಾದರೂ ತಿನ್ನಬಹುದು ಎಂದು ಚೀನಿಕಾಯಿ ಹಲ್ವವನ್ನೂ ಬಿಡದೇ ಮಾಡಿಸಿ ತಿಂದಿದ್ದಕ್ಕೆ ಶ್ಯಾಮರಾಯರಿಗೆ ವಿಪರೀತ ಸಿಟ್ಟೇರಿತು. ಮರುದಿನವೇ ಡಾಕ್ಟರ್ ಬಳಿ ಅವನನ್ನು ಕರೆದೊಯ್ದರು. ಶುಗರ್ ಟೆಸ್ಟ್ ಮಾಡಿದ ಡಾಕ್ಟರು ಕಡೆಯಲ್ಲಿ ಎಚ್ಚರಿಕೆ ಎಂಬಂತೆ, ಇನ್ನು ನಿಗಾ ವಹಿಸದಿದ್ದರೆ ನಿಮಗೇ ಕಷ್ಟ ಎಂದು ಜಾಸ್ತಿ ಡೋಸೇಜಿನ ಮಾತ್ರೆ ಕೊಟ್ಟು ಕಳುಹಿಸಿದರು. “ಈ ಡಾಕ್ಟರ್ ಕುಲವೇ ಹೀಗೆ, ದುಡ್ಡು ಕೀಳೋಕೋಸ್ಕರ ಇಲ್ಲದ ಕಾಯಿಲೆಯನ್ನೂ ಇದೆ ಅಂತಾರೆ” ಎಂದು ಗೊಣಗಿದ ಗೋವಿಂದ, ಪಥ್ಯ ಮಾಡಲು ಹೇಳಿದ ಡಾಕ್ಟರನ್ನು ಶಪಿಸಿದ. ಇದಾದ ಮೇಲೂ ಗೋವಿಂದ ತನ್ನ ಆರೋಗ್ಯದ ಬಗ್ಗೆ ಹೆಚ್ಚು ನಿಗಾ ವಹಿಸದಿದ್ದಾಗ ಅವನನ್ನು ವಾಪಸು ಕಳುಹಿಸುವ ಆಲೋಚನೆಗೆ ಶ್ಯಾಮರಾಯರು ಬಂದರು. ಅವತ್ತು ಬಟ್ಟಲಷ್ಟು ಕಕ್ಕಿದ್ದ ಕರಿನಾಯಿಗೆ ಬೀಸಿ ಬಾರಿಸಿದಾಗ ಎಚ್ಚರಗೊಂಡು, ಧಡಧಡನೆ ಎದ್ದು ಚಾಪೆ ಸುತ್ತಿಟ್ಟು ಓಡೋಡಿ ಹೋಗಿ ಸ್ನಾನ ಮುಗಿಸಿಕೊಂಡು ಬಂದ ಗೋವಿಂದ, ಕಾಫಿಗೆ ಮೂರು ಚಮಚ ಸಕ್ಕರೆ ಕದ್ದು ಸೇರಿಸಿಕೊಂಡಿದ್ದನ್ನೂ, ಅದರೊಟ್ಟಿಗೆ ಮಾತ್ರೆ ನುಂಗಿದ್ದನ್ನೂ ಲಕ್ಷ್ಮಿ ನೋಡಿದ್ದಳು. ಅತ್ತ ಗೋವಿಂದ ಪೂಜೆಗೆ ಹೋಗುತ್ತಿದ್ದಂತೆಯೇ ಎಲ್ಲವನ್ನೂ ಶ್ಯಾಮರಾಯರಿಗೆ ಬಿಡಿಸಿ ಹೇಳಿದಳು.

ಇನ್ನು ಆತನನ್ನು ತಿದ್ದಲು ಸಾಧ್ಯವೇ ಇಲ್ಲವೆಂದರಿತ ಶ್ಯಾಮರಾಯರು ಅಂದು ಮಧ್ಯಾಹ್ನ ಊಟ ಮುಗಿಯುತ್ತಿದ್ದಂತೆಯೇ ಉಪಾಯ ಮಾಡಿ ಅವನನ್ನು ಹೊರಡಿಸಿ, ಕೊಡಬೇಕಾದ ಸಂಬಳದ ಹಣವನ್ನು ಅವನ ಕಣ್ಣೆದುರಲ್ಲೇ ಎರಡೆರಡು ಬಾರಿ ಎಣಿಸಿ ಕೈಯಲ್ಲಿಟ್ಟರು. ಮನೆಗೆ ಹೋದವನೇ ಗುರುರಾಜನ ಬಳಿ ಹೋಗಿ ಶುಗರಿನ ವಿಚಾರವನ್ನು ಮರೆಯದೇ ತಿಳಿಸಬೇಕು, ಜೊತೆಗೆ ತಲುಪಿದ್ದೇನೆಂಬ ಖಾತ್ರಿಗೆ ಫೋನು ಮಾಡಬೇಕೆಂದು ಹೇಳಿ ತಮ್ಮ ನಂಬರನ್ನು ಕೊಟ್ಟು, ಶಿವಮೊಗ್ಗ ಬಸ್ಸು ಹತ್ತಿಸಿದರು. ಶಿವಮೊಗ್ಗಕ್ಕೆ ಬಂದು ತಲುಪಿದ ಗೋವಿಂದ ಶ್ಯಾಮರಾಯರ ಮನೆಗೆ ಫೋನನ್ನೂ ಮಾಡಲಿಲ್ಲ, ಗುರುರಾಜನ ಮನೆಗೂ ಹೋಗಲಿಲ್ಲ. ಮನೆಗೆ ಹೋದವನೇ ಬ್ಯಾಗಿನಿಂದ ಬಟ್ಟೆಯನ್ನೆಲ್ಲಾ ತೆಗೆದು, “ಆಯ್ತು... ಇನ್ನು, ನನ್ನನ್ನ ಕೇಳೋರು ಯಾರೂ ಗತಿಯಿಲ್ಲ” ಎಂದು ಗೊಣಗಿ ಶ್ಯಾಮರಾಯರು ಎರಡೆರಡು ಬಾರಿ ಎಣಿಸಿ ಕೊಟ್ಟ ದುಡ್ಡನ್ನು ಮತ್ತೊಮ್ಮೆ ಎಣಿಸಿದ. ನಾಲ್ಕು ತಿಂಗಳ ಸಂಬಳಕ್ಕೆ